## ಮೊಟ್ಟೆ: ರಾಜಕಾರಣ ಬೇಡ

ಸುದ್ದಿ ವಾಹಿನಿಗಳ ಮುಖ್ಯಾಂಶಗಳನ್ನು ಯೋಚಿಸಿದರೆ – ವರುಣಾಘಾತ, ಬೆಟ್ಟ ಕುಸಿತ, ಲೈಂಗಿಕ ಹಗರಣ, ಫೋಟೊ–ಬ್ಯಾನರ್ ಹರಿದ ಸುದ್ದಿಗಳು, ಮಾಂಸ ಸೇವನೆ, ದೇವಾಲಯ, ಹಾಗೇ ಹೇಳೇ ಇಲ್ಲ, ಮಾಧ್ಯಮಗಳ ಸೃಷ್ಟಿ... ಇಷ್ಟೇ ವಿಷಯಗಳು. ಉರಿವ ಬೆಂಕಿಗೆ ಎಣ್ಣೆ ಸುರಿವ ರೀತಿಯ ಈ ಸುದ್ದಿಗಳ ಜೊತೆಗೆ ಮೊಟ್ಟೆ ರಾಜಕಾರಣವೂ ಸೇರಿಕೊಂಡಿದೆ. ಈಚೆಗೆ ಬೆಳಗಿನ ಸುಪ್ರಭಾತದಂತೆಯೇ ಪ್ರಾರಂಭ ಆಗಿ, ತಡ ರಾತ್ರಿಯವರೆಗೂ ಒಬ್ಬರ ಮೇಲೆ ಒಬ್ಬರು ಜಿದ್ದಿಗೆ ಬಿದ್ದಂತೆ ಮೊಟ್ಟೆ ರಾಜಕಾರಣದ ಚರ್ಚೆ ಮಾಡುತ್ತಾರೆ. 'ಮೊಟ್ಟೆ' ಹೆಸರಿನಲ್ಲಿ ತಮ್ಮ ಬೇಳೆ ಬೇಯಿಸಿಕೊಳ್ಳುತ್ತಿರುವಾಗ ಈ ಸುದ್ದಿ ವಾಹಿನಿಗಳೂ ಹೊಟ್ಟೆಪಾಡಿನ ಕಸರತ್ತು ಮಾಡುತ್ತಿರುವ ಪರಿ ಅಸಹ್ಯ ಹುಟ್ಟಿಸುವಂತಿದೆ.

—ಆರ್. ವೀರೇಶ್ ಕುಮಾರ್, ಬೆಂಗಳೂರು

## ದೊರೆಸಾನಿಗೆ ಕೊಕ್

ಕಾರಣ ನೀಡದೆ ಕನ್ನಡ ಟೀವಿ ಧಾರಾವಾಹಿಗಳಿಗೆ ಒಮ್ಮೊಮ್ಮೆ ದಿಢೀರ್ ಕೊಕ್ ನೀಡುತ್ತಾರೆ. ಹಾಗೆಯೇ ಕಲರ್ಸ್ ಕನ್ನಡದ 'ದೊರೆಸಾನಿ' ದಿಢೀರೆಂದು ಅಂತ್ಯ ಕಂಡಿದೆ. ವೀಕ್ಷಕರಿಂದ ನಿರಂತರವಾಗಿ ಟೀಕೆಗೊಳಗಾಗಿರುವ 'ಮಂಗಳ ಗೌರಿ ಮದುವೆ'ಯಂತಹ ಧಾರಾವಾಹಿಯನ್ನು ಮುಂದುವರಿಸುತ್ತಾ, ದೊರೆಸಾನಿ ನಿಲ್ಲಿಸಿದ್ದರ ಹಿಂದಿನ ಲಾಜಿಕ್ ಅರ್ಥವಾಗುವುದಿಲ್ಲ. ಟೀವಿಗೆ ಎಳೆಯುವುದು ಗೊತ್ತು, ಕಟ್ ಮಾಡುವುದೂ ಗೊತ್ತು ಎನ್ನುವ ಸತ್ಯ ಇನ್ನೊಮ್ಮೆ ಅನಾವರಣಗೊಂಡಿದೆ.

—ರಮಾನಂದ ಶರ್ಮಾ, ಬೆಂಗಳೂರು

## ಕಂತಿಗೆ ಕಡಿವಾಣ ಇದ್ದರೆ ಚಂದ

ತೋರಿದ್ದನ್ನೇ ತೋರುವ, ಒಂದು ಸಾಲಿನಲ್ಲಿ ಹೇಳಬಹುದಾದ ಘಟನೆಯನ್ನು ವಾರವಿಡೀ ಎಳೆದಾಡುವ ಕಿಸಬಾಯಿ ಧಾರಾವಾಹಿಗಳಿಂದ ವೀಕ್ಷಕರು ಬೇಸತ್ತಿದ್ದಾರೆ. ಮೊದಲೆರಡು ವಾರ ರೇಸ್ ಕುದುರೆಯಂತೆ ಓಟ, ನಂತರ ಚ್ಯೂಯಿಂಗ್ ಗಮ್‌ನಂತೆ ಎಳೆದಾಟ. ಪ್ರತಿ ನಿರ್ದೇಶಕರಿಗೂ ತಮ್ಮ ಧಾರಾವಾಹಿ 1000 ಕಂತುಗಳ ಗಡಿ ದಾಟಿಸುವ ಆಕಾಂಕ್ಷೆ. 'ಮಂಗಳಗೌರಿ ಮದುವೆ', 'ಪಾರು', 'ನಮ್ಮನೆ ಯುವರಾಣಿ', 'ಕನ್ನಡತಿ', 'ಜೊತೆ ಜೊತೆಯಲಿ', 'ಮುದ್ದುಲಕ್ಷ್ಮಿ' ಧಾರಾವಾಹಿಗಳು ಸಾವಿರದ ಎಡೆಗೆ ಸಾಗುತ್ತಿವೆ. ಧಾರಾವಾಹಿಗಳನ್ನು ಗರಿಷ್ಠ 50 ಕಂತುಗಳಲ್ಲಿ ಮುಗಿಸಲೇಬೇಕೆಂಬ ನಿಯಮ ಇದ್ದರೆ ಚೆನ್ನಾಗಿರುತ್ತದೆ.

—ಕೆ. ಶ್ರೀನಿವಾಸ ರಾವ್, ಹರಪನಹಳ್ಳಿ

ವಾರದ ಪತ್ರ

## ಬೊಜ್ಜು ಮನರಂಜನೆಯಲ್ಲ!

ಝೀ ಕನ್ನಡ 'ಜೋಡಿ ನಂ. 1' ರಿಯಾಲಿಟಿ ಶೋನಲ್ಲಿ ಗಣೇಶ ಚತುರ್ಥಿಯ ಪ್ರಯುಕ್ತ ಮಕ್ಕಳನ್ನು ಬರಿ ಮೈಯಲ್ಲಿ ಕರೆಸಿ, ಅವರಿಗೆ ಮಹಿಳಾ ಸ್ಪರ್ಧಿಗಳಿಂದ ಗಣೇಶನ ವೇಷಭೂಷಣ ತೊಡಿಸಿದರು. ಹಬ್ಬದ ಪ್ರಯುಕ್ತ ಮನೋರಂಜನೆಗೆ ಈ ಪ್ರಯತ್ನ ಚೆನ್ನಾಗಿಯೇ ಇತ್ತು. ಆದರೆ ವೇಷಧಾರಿಗಳಾಗಿ ಆಹ್ವಾನಿಸಿದ ಬಾಲಕರ ಬೊಜ್ಜು ಅವರಿಗೇ ಮುಜುಗರಕ್ಕೆ ಕಾರಣವಾಗಬಹುದಾದ ಸಾಧ್ಯತೆಯಿತ್ತು. ಮಕ್ಕಳ ಬೊಜ್ಜನ್ನು ಮನರಂಜನೆಗೆ ಬಳಸಿಕೊಂಡದ್ದು ಸರಿಯಲ್ಲ.

—ರಮಣ್ ಶೆಟ್ಟಿ ರೆಂಜಾಳ್, ಮುಂಬಯಿ

## ರಾಮಾಚಾರಿಗೆ ಜಾಣ ಮರೆವು

ಕಂತೆಗಟ್ಟಲೆ ಹಣ ತಂದ ಚಾರುವನ್ನು ಪೊಲೀಸರಿಗೊಪ್ಪಿಸಿದ ರಾಮಾಚಾರಿ, ಗಡಂಗ್ ದೇಶಪ್ಪನ ಹತ್ತಿರ ಲಕ್ಷಾಂತರ ರೂಪಾಯಿಗಳನ್ನು ಪಡೆದುಕೊಂಡಿದ್ದು ಎಷ್ಟು ಸರಿ? ಆ ನೋಟುಗಳ ಕಂತೆಗಳನ್ನು ಮನೆಯಲ್ಲಿ ಇಟ್ಟುಕೊಂಡಿದ್ದು ಏಕೆಂದು ರಾಮಾಚಾರಿ ಕೇಳಲಿಲ್ಲವೇಕೆ? ರಾಮಾಚಾರಿಗೆ ತನ್ನ ಅವಶ್ಯಕತೆ ಬಂದಾಗ ಕಾನೂನು ಮರೆತುಹೋದಂತೆ ಕಾಣುತ್ತದೆ.

—ಲಾವಣ್ಯಗೌರಿ ವೆಂಕಟೇಶ್, ಬೆಂಗಳೂರು

## ರಣಸುದ್ದಿಯ ರಣಹಿಂಸೆ

ರಣಬಿಸಿಲು, ರಣಮಳೆ, ರಣ ಭೀಕರ ಅಪಘಾತ, ರಣವೀಳ್ಯ – ಅಬ್ಬಾ, ಈ ರಣ ಪದ ಬಳಕೆ ಹೀಗೆ ಸಾಗುತ್ತಲೇ ಇದೆ. ನಮ್ಮ ಸುದ್ದಿವಾಹಿನಿಗಳು ಸುದ್ದಿ ಬಿತ್ತರಿಸುವಾಗ ಪ್ರಕೃತಿಯಲ್ಲಿ ಸಂಭವಿಸುವ ಸಹಜ ಕ್ರಿಯೆಗೆ ರಣ ಪದ ಬಳಕೆ ಮಾಡುತ್ತಿರುವುದು ರಣಹಿಂಸೆ ಎನಿಸುತ್ತದೆ. ಈ ರೀತಿಯ ಪದ ಬಳಕೆಗೆ ವಾಹಿನಿಗಳು ಕಡಿವಾಣ ಹಾಕಿಕೊಳ್ಳಲೇಬೇಕು.

—ಎಂ.ಜೆ. ಅಭಿಷೇಕ್, ಬೆಂಗಳೂರು

## ರಂಜನೀಯ 'ಇಸ್ಮಾರ್ಟ್'

ಸ್ಟಾರ್ ಸುವರ್ಣದ 'ಇಸ್ಮಾರ್ಟ್9' ರಿಯಾಲಿಟಿ ಶೋ ಬಹಳ ಚೆನ್ನಾಗಿ ಮೂಡಿಬರುತ್ತಿದೆ. ಇತರೆ ಶೋಗಳಿಗೆ ಹೋಲಿಸಿದರೆ ಇದು ನಿಜಕ್ಕೂ ಅರ್ಥಪೂರ್ಣ ಕಾರ್ಯಕ್ರಮ ಎಂದು ಅನಿಸುತ್ತದೆ. ಕಿರುತೆರೆ ನಿರೂಪಣೆಯಿಂದಲೇ ಜನಪ್ರಿಯ ನಟ ಆಗಿರುವ ಗಣೇಶ್ ಅವರ ನಿರೂಪಣೆ ಕೂಡ ಸೂಪರ್ ಆಗಿದೆ. ಸ್ಪರ್ಧಿಗಳಿಂದಲೂ ಒಳ್ಳೆಯ ಮನೋರಂಜನೆ ದೊರೆಯುತ್ತಿದೆ.

—ಮೇಘನಾ ರಘುನಂದನ್, ಹೂವಿನ ಹಡಗಲಿ

## ಪ್ರತಿಭಾಪೂರ್ಣ ಅಭಿನಯ

ಇತ್ತೀಚೆಗೆ ತೀರಾ ಹಾಸ್ಯಾಸ್ಪದ ಎನ್ನುವಂತೆ ಹಾಸ್ಯ ಕಾರ್ಯಕ್ರಮಗಳು ನಡೆಯುತ್ತಿವೆ. ಗಂಡು ಹೆಣ್ಣಿನ ವೇಷದಲ್ಲಿ, ಹೆಣ್ಣು ಗಂಡಿನ ವೇಷದಲ್ಲಿ ನಟಿಸುವುದು ಒಂದು ಅಧ್ಯಾಯ. ಅದರಲ್ಲಿ ಹಾಸ್ಯಕ್ಕಿಂತ ಹೆಚ್ಚಾಗಿ ಅಪಹಾಸ್ಯವೇ ಹೆಚ್ಚಿರುತ್ತದೆ. ಅದಕ್ಕೆ ಅಪವಾದವೆಂದರೆ 'ಗಿಚ್ಚಿ ಗಿಲಿಗಿಲಿ'. ಇತ್ತೀಚಿನ ಒಂದು ಪ್ರಹಸನದಲ್ಲಿ ರಾಘವೇಂದ್ರ ಅವರ ಏಕಪಾತ್ರಾಭಿನಯ ಚೆನ್ನಾಗಿತ್ತು. ಅದು ಕೇವಲ ಹಾಸ್ಯ ಪ್ರಸಂಗವಾಗಿರದೆ, ಅವರ ಪ್ರತಿಭೆಯನ್ನು ಪ್ರತಿಬಿಂಬಿಸುವಂತೆ ಇತ್ತು. ಗಂಡಿನ ಗತ್ತಿನೊಂದಿಗೆ ಹೆಣ್ಣಿನ ನಾಜೂಕುತನವನ್ನೂ ಅಷ್ಟೇ ಯಶಸ್ವಿಯಾಗಿ ನಿರ್ವಹಿಸಿದ ರಾಘು–ರಾಗಿಣಿ ದ್ವಿಪಾತ್ರದಲ್ಲಿ ನಟಿಸಿದ ರೀತಿ ಅಭಿನಂದನೀಯ.

—ಲಲಿತಾ ಮೂರ್ತಿ, ಬೆಂಗಳೂರು

## ಜನ ಬೆಂಬಲಕ್ಕೆ ವಿಷಾದ

ಬಹುತೇಕ ಧಾರಾವಾಹಿಗಳ 'ಥೀಮ್' ಸಮಾಜಮುಖಿಯಾಗಿರದೇ ವೀಕ್ಷಕರನ್ನು ಉದ್ವೇಗಕ್ಕೆ ಒಳಪಡಿಸುವಂತೆ ಇವೆ. ನಕಾರಾತ್ಮಕ, ಹಗೆತನದ ಚಿಂತನೆಗಳಿಗೆ ಪ್ರೇರೇಪಿಸುತ್ತಿವೆ. ಅಂತಹ ಧಾರಾವಾಹಿಗಳೇ ವರ್ಷಗಟ್ಟಲೇ ಓಡುತ್ತವೆ. ಅಂದರೆ ವೀಕ್ಷಕರು ಇದ್ದಾರೆ ಎನ್ನುವುದು ನಿಶ್ಚಿತ.

ಭಾವನಾತ್ಮಕ, ಗುಣಾತ್ಮಕ ಅಂಶಗಳನ್ನು ಒಳಗೊಂಡ ಧಾರಾವಾಹಿಗಳಿಗೆ ವೀಕ್ಷಕರ ಕೊರತೆ ಮತ್ತು ಆರ್ಥಿಕವಾಗಿ ಹಾನಿ ಅನುಭವಿಸುವ ಆತಂಕ ಇದ್ದಿರಬಹುದು. ಸಮಾಜದಲ್ಲಿ ತುಚ್ಛ ಕಾಯಕಗಳಿಗೇನೂ ಕೊರತೆ ಇಲ್ಲ. ಆದರೆ ಅವುಗಳನ್ನು ಮತ್ತಷ್ಟು ವೈಭವೀಕರಿಸುವವು, ಬೆಂಬಲಿಸುವುದು ವಿಷಾದನೀಯ.

—ರಾಜೀವ್ ಎನ್. ಮಾಗಲ್, ಸಕಲೇಶಪುರ

## ಭಾಷೆಯ ಸೊಗಸು

ಸಿರಿ ಕನ್ನಡದ 'ಯುಗಾಂತರ' ಧಾರಾವಾಹಿಯಲ್ಲಿನ ಕನ್ನಡ ಭಾಷೆಯ ಸೊಗಸು ನಿಜಕ್ಕೂ ಅದ್ಭುತ. ಜೀವನಕ್ಕೆ ಹತ್ತಿರವಾದ ಸಂಭಾಷಣೆಯಿಂದ ಸೇತುರಾಮ್ ಅವರ ಭಾಷೆಯ ಕಾಳಜಿ ಎಲ್ಲಾ ವರ್ಗದವರನ್ನು ಸೆಳೆಯುವುದರಲ್ಲಿ ಸಂಶಯವಿಲ್ಲ.

—ಭಾರತೀ ಗಂಗಾಧರ್, ಬೆಂಗಳೂರು